ಪ್ರಬಂಧ

# ಬೇವು ಎಂಬ ಬೆರಗು



ಜಿ.ಎನ್.ಧನಂಜಯ ಮೂರ್ತಿ

ಕಲೆ: ಗುಜ್ಜಾರ್

ಖಲೀಲ್ ಗಿಬ್ರಾನ್, ಸುಖ ಮತ್ತು ದುಃಖಗಳಲ್ಲಿ ಒಂದು ನಿಮ್ಮೊಡನೆ ಊಟಕ್ಕೆ ಕುಳಿತರೆ ಮತ್ತೊಂದು ನಿಮ್ಮೊಂದಿಗೆ ನಿದ್ರಿಸಲು ಹಾಸಿಗೆಗೆ ಬರುತ್ತದೆ ಎನ್ನುತ್ತಾನೆ. ಗಿಬ್ರಾನನಂತೆ ಅನೇಕ ಜನ ದಾರ್ಶನಿಕರು ಬಾಳಿನಲ್ಲಿ ಹಾಸುಹೊಕ್ಕಾಗಿರುವ ಸುಖದುಃಖಗಳನ್ನು ನಿರೂಪಿಸಲು ಈ ತರದ ಎಷ್ಟೊ ರೂಪಕಗಳನ್ನು ಸೃಷ್ಟಿಸಿದ್ದಾರೆ. ಅಂತೆಯೆ ಜನಪದರು ಸುಖ-ದುಃಖಗಳು ಒಂದಕ್ಕೊಂದು ಹೆಣೆದುಕೊಂಡಿರುವುದನ್ನು ಬೇವು-ಬೆಲ್ಲಗಳ ಹೆಸರಿನಲ್ಲಿ ಸಾಂಕೇತಿಕವಾಗಿ ಆಚರಿಸುತ್ತಾರೆ.

ಅಪ್ಪ, ಹಬ್ಬಗಳು ಯಾಕಾದರೂ ಬರುತ್ತವೊ ಎಂದು ಯಾತನೆ ಪಡುತ್ತಿದ್ದ. ಉಳ್ಳವರ ಪಾಲಿಗೆ ಪ್ರತಿದಿನವೂ ಹಬ್ಬವಾದರೆ ಇಲ್ಲದವರಿಗೆ ಹಬ್ಬಗಳ ಆಗಮನ ಅಗ್ನಿಪರೀಕ್ಷೆ. ಇರಲಿ, ವಿಚಾರ ಏನೆಂದರೆ ಬೆಲ್ಲಕ್ಕಿರುವಷ್ಟೆ ಬೆಲೆ ಬೇವಿಗೂ ಇದೆ ಎನ್ನುವುದು ನನ್ನ ಮತ. ಇದು ಅರಿವಾಗಬೇಕೆಂದರೆ ಬಯಲುಸೀಮೆಯ ಜನರ ಬದುಕನ್ನು ಸೂಕ್ಷ್ಮ ನೋಡಬೇಕು. ಬಯಲುಸೀಮೆಯ ಹೊಲಗಳು, ಹಿತ್ತಿಲುಗಳತ್ತ ಕಣ್ಣು ಹಾಯಿಸಿದರೆ ಸಾಕು, ಅಲ್ಲೊಂದು ಬೇವಿನ ಗಿಡ ಕಾಣಿಸುತ್ತದೆ. ನನ್ನ ತಲೆಮಾರಿನ ಗೆಳೆಯರಿಗೆ ಬೇವು ಸುಪರಿಚಿತ ಸಖಬಂಧು. ಪ್ರಾಥಮಿಕ ಶಾಲೆಯನ್ನು ಕಲಿಯುವಾಗ ಗುಡಿಸಲಿನಲ್ಲಿ ಹೆಗ್ಗಣಗಳ ಬಾಯಿಗೆ, ಅಸುರಕ್ಷತೆಗೆ ಸಿಕ್ಕು ಚಿಂದಿಯಾಗಿರುತ್ತಿದ್ದ ನಮ್ಮ ನೋಟುಬುಕ್ಕಿನ ಹಾಳೆಗಳನ್ನು ಮತ್ತೆ ಬೆಸೆಯಲು ಬೇವಿನ ಮರದ ಗರ್ಭದಿಂದಿಳಿವ ಅಂಟನ್ನು ಗೆಳೆಯರೆಲ್ಲ ಕೂಡಿ ಬಳಿದುಕೊಳ್ಳುತ್ತಿದ್ದೆವು. ಹಲ್ಲು ತೊಳೆಯುವ ದೇಸೀ ಬ್ರಶ್ಶಾಗಿರುವ ಈ ಬೇವು ಬಯಲುನಾಡಿನ ಬದುಕಿನ ಜೊತೆಗೆ ಈಗಲೂ ನಾನಾ ನಮೂನೆಗಳಲ್ಲಿ ಹಾಗೆಯೇ ಅಂಟಿಕೊಂಡಿದೆ.

ಹಕ್ಕಿಗಳು ಬೇವಿನ ಹಣ್ಣನ್ನು ತಿಂದು ತಮ್ಮ ಹಿಕ್ಕೆಯ ಮೂಲಕ ಬೇವನ್ನು ಬಯಲುನಾಡಿನ ತುಂಬಾ ಪಸರಿಸುತ್ತವೆ. ಮೈಗಂಟಿದ ಕಜ್ಜಿಗುಳ್ಳೆಗಳು ಮುಂತಾದ ಚರ್ಮವ್ಯಾಧಿಗಳಿಗೆ ಬೇವು ರಾಮಬಾಣ. ಮೈ ಬಿಸಿಯಾಗಿರುವ ಮಕ್ಕಳಿಗೆ ಬೇವಿನ ಒಳ್ಳಾರು ಕುಡಿಸಿ ಜ್ವರವನ್ನು ಉಪಶಮನ ಮಾಡುತ್ತಾರೆ. ದೇವರ ದಾಸಿಮಯ್ಯ ಜ್ವರವಿಡಿದ ಬಾಯಿಗೆ ನೊರೆವಾಲೂ ರುಚಿಸುವುದಿಲ್ಲ ಎನ್ನುತ್ತಾನೆ. ಅಂಥದ್ದರಲ್ಲಿ ಜ್ವರದಿಂದ ಮೊದಲೇ ಕಕ್ಕಟೆ ಕಹಿಯಾಗಿರುವ ರಸನ ಬೇವಿನ 'ಇಸ'ವನ್ನು ಸಹಿಸಿಕೊಳ್ಳಬೇಕು. ಆದರೆ ಮನುಷ್ಯ ಜೀವಿಯ ನಾಲಗೆಗೆ ಕಹಿಯಾದದ್ದರ ಬಗ್ಗೆ